ದಿನಾಂಕಃ 20-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದಃ**

ನಾನು ಎಂ ಎಸ್ ಸಿ ಸ್ನಾತಕೋತ್ತರ ಪದವೀಧರೆ. ನಾನು ಚನ್ನಗಿರಿ ತಾಃ ರಾಮೇನಹಳ್ಳಿ ಗ್ರಾಮದ ವಾಸಿಯಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಸಂತೆಬೆನ್ನೂರು ಗ್ರಾಮದ ವಿಳಾಸವನ್ನು ನಮೂದಿಸಿರುತ್ತೇನೆ. ನಾನು ರಾಮೇನಹಳ್ಳಿಯಲ್ಲಿ ವಾಸವಾಗಿದ್ದರೆ ರಾಮೇನಹಳ್ಳಿ ಎಂದೇ ನಮೂದಿಸುತ್ತಿದ್ದು ನಾನು ಸದರಿ ಗ್ರಾಮದಲ್ಲಿ ವಾಸವಿಲ್ಲದ ಕಾರಣ ಸಂತೆಬೆನ್ನೂರಿನ ವಿಳಾಸವನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ರಾಮೇನಹಳ್ಳಿಯಲ್ಲಿ ನಮಗೆ ಮನೆ ಇಲ್ಲ ಎಂದರೆ ಸರಿ. ಆದರೆ ನಾವು ಖರೀದಿಸಿದ ಆಸ್ತಿ ಇದೆ. ಸಂತೆಬೆನ್ನೂರಿನಲ್ಲಿ ನಾವು ವಾಸಿಸುತ್ತಿರುವ ಮನೆ ಇದೆ. ನಾನು ಮೂಲತಃ ರಾಮೇನಹಳ್ಳಿ ವಾಸಿಯಲ್ಲ. ಪ್ರಸ್ತುತ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಶಾಂತಮ್ಮ ಕೋಂ ಶಂಕರಪ್ಪ ಎನ್ನುವವರು ನನ್ನ ಅತ್ತೆ. ಸಾಕ್ಷಿ ಮುಂದುವರೆದು ದಾವಾಸ್ತಿಯನ್ನು ನಾನು ಸದರಿಯವರಿಂದ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿ ಮೂಲತಃ ಶ್ರೀನಿವಾಸಮೂರ್ತಿ ಎನ್ನುವವರ ಹೆಸರಿನಲ್ಲಿದ್ದು ಸದರಿಯವರಿಂದ ನನ್ನ ಅತ್ತೆ ಖರೀದಿಸಿರುತ್ತಾರೆ.

ದಾವಾಸ್ತಿ ಮೂಲತಃ ನಾರಾಯಣ ಜೋಯಿಸ್ ಎನ್ನುವವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಶ್ರೀನಿವಾಸಮೂರ್ತಿ ಮತ್ತು ನಾರಾಯಣ ಜೋಯಿಸ್ ರವರ ನಡುವೆ ಇರುವ ಸಂಬಂಧ ಗೊತ್ತಿದೆಯೇ ಎಂದರೆ ಸಾಕ್ಷಿ ಶ್ರೀನಿವಾಸಮೂರ್ತಿಯವರ ತಂದೆ ನಾರಾಯಣ ಜೋಯಿಸ್ಇರಬಹುದು ಎಂದು ನುಡಿಯುತ್ತಾರೆ. ದಾವಾಸ್ತಿ ಮೂಲತಃ ಅವರಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿ ಸದರಿ ನಾರಾಯಣ ಜೋಯಿಸ್ ರವರಿಗೆ ಪಾಟೇಲ್ ಉಂಬಳಿ ಮುಖಾಂತರ ಬಂದಂತಹ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಜೋಯಿಸ್ ರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಹೆಚ್ ಎನ್ ವೆಂಕಟೇಶ ಮೂರ್ತಿ , ಹೆಚ್ ಎನ್ ನಾಗರಾಜ ಮೂರ್ತಿ, ಹೆಚ್ ಎನ್ ರಮೇಶ್ ಜೋಯಿಸ್ , ಹೆಚ್ ಎನ್ ಜಯಲಕ್ಷ್ಮಿ, ಲಲಿತಾ , ಹೆಚ್ ಎನ್ ಸುಶೀಲ ಎಂಬ 6 ಜನ ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾಸ್ತಿ Karnataka villager officers abolition Act-1961 ರ ಪ್ರಕಾರ ಸರ್ಕಾರಕ್ಕೆ ಹಿಂದಿರುಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. (ಸದರಿ ಪ್ರಶ್ನೆ ಕಾನೂನಾತ್ಮಕ ಪ್ರಶ್ನೆಯಾದ ಕಾರಣ ವಾದಿ ಪರ ವಕೀಲರು ತಕರಾರು ತೆಗೆದಿರುತ್ತಾರೆ.).

1976 ರಲ್ಲಿ ಸದರಿ ನಾರಾಯಣ ಜೋಯಿಸ್ ರವರ ಹಿರಿಯ ಮಗನಾದ ಹೆಚ್ ಎನ್ ವೆಂಕಟೇಶ ಮೂರ್ತಿಯವರಿಗೆ ದಾವಾಸ್ತಿ ಪುನಃ ಮರು ಮಂಜೂರಾತಿ ಎಂ ಆರ್ ನಂ 2/1982-83 ರಂತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ನಾರಾಯಣ ಜೋಯಿಸ್ ರವರ ಕಾಲದಿಂದಲೂ ಸಹ ಪ್ರತಿವಾದಿಗಳ ಮನೆತನದ ಒಡೆತನದಲ್ಲಿ ಮುಂದುವರೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 7 ನೇ ಪ್ರತಿವಾದಿಗಳು ಸಂಬಂಧಿಕರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ದಾವಾ ಪತ್ರದಲ್ಲಿ ಪ್ರತಿವಾದಿಗಳು ಎಲ್ಲರೂ ಹಾಲಬೋವಿ ವಂಶಸ್ಥರು ಎಂದು ನಮೂದಿಸಿರುತ್ತೇನೆ

ಎಂದರೆ ಸರಿ. ಸದರಿ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ವೆಂಕಟೇಶ ಮೂರ್ತಿಯ ಮಗನ ಹೆಸರು ಶ್ರೀನಿವಾಸ ಮೂರ್ತಿ.

ಸದರಿ ಶ್ರೀನಿವಾಸ ಮೂರ್ತಿಯವರು 2 ನೇ ಪ್ರತಿವಾದಿಯ ತಂದೆಯಾದ ರುದ್ರಪ್ಪನವರಿಗೆ 2008 ರಲ್ಲಿ ದಾವಾಸ್ತಿಯ ಕುರಿತು ಒಂದು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1961 ರಿಂದಲೂ ಸಹ ಪ್ರತಿವಾದಿಗಳ ವಂಶಸ್ಥರು ದಾವಾಸ್ತಿಯಲ್ಲಿ ಅನುಭವದಲ್ಲಿದ್ದು 2008 ರ ಸಹ ಕ್ರಯ ಕರಾರುಪತ್ರದ ನಂತರವೂ ಅವರೇ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ದಾವಾಪತ್ರದಲ್ಲಿ ಪ್ರತಿವಾದಿಗಳಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ತಿಯ ಸ್ವಾಧೀನಕ್ಕೆ ತೊಂದರೆಕೊಟ್ಟರು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿ ಇರದ ಕಾರಣ ಪ್ರತಿವಾದಿಗಳು ತೊಂದರೆ ಕೊಡುವ ಪ್ರಶ್ನೆಯೇ ಇಲ್ಲ ಎಂದರೆ ಸಾಕ್ಷಿ ದಾಖಲೆಗಳ ಪ್ರಕಾರ ನಾನೇ ಸ್ವಾಧೀನದಲ್ಲಿದ್ದೆನೆ ಎಂದು ನುಡಿಯುತ್ತಾರೆ.

ನಿಪಿ-1 ಮತ್ತು 4 ನ್ನು ಪ್ರತಿವಾದಿಗಳಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಅತ್ತೆಯಾದ ಶಾಂತಮ್ಮ ಫೆಬ್ರವರಿ 2018 ನೇ ಸಾಲಿನಲ್ಲಿ ಪ್ರತಿವಾದಿಗಳ ದಾವಾಸ್ತಿಯ ಸಾವಧೀನಾನುಭವಕ್ಕೆ ತೊಂದರೆಕೊಟ್ಟ ಕಾರಣ ಸದರಿ ಪ್ರತಿವಾದಿಗಳು ನನ್ನ ಅತ್ತೆ ಮತ್ತು ವರದ ಮತ್ತು ಹನುಮಂತಪ್ಪ ಎನ್ನುವವರ ಮೇಲೆ ಅಸಲು ದಾವಾ ನಂ 32/2018 ರಂತೆ 1 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂದಕಾಜ್ಞೆ ಪರಿಹಾರ ಕೋರಿ ದಾವೆ ದಾಖ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಶಾಂತಮ್ಮನ ವಿರುದ್ದ ದಾವೆಯನ್ನು ದಾಖಲಿಸಿದ್ದರ ಪರಿಣಾಮ ಸದರಿ ದಾವೆಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಲು ದಾವಾಸ್ತಿಯನ್ನು ನನಗೆ ನಿಪಿ-1 ರಂತೆ ಮಾರಾಟ ಮಾಡಿ ಸುಳ್ಳು ಖಾತೆಯನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ನಾರಾಯಣ ಜೋಯಿಸರ 6 ಜನ ಮಕ್ಕಳು ದಾವಾಸ್ತಿಯಲ್ಲಿ ತಮಗೂ ಹಿಸ್ಸಾ ಹಕ್ಕು ಇದೆ ಎಂದು ಅಸಲು ದಾವಾ ನಂ 222/2017 ರಂತೆ ಇದೇ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ನಾರಾಯಣ ಜೋಯಿಸರ ಒಟ್ಟು ಕುಟುಂಬದ ಆಸ್ತಿಯಾದ ಕಾರಣ ಹೆಚ್ ಎನ್ ಶ್ರೀನಿವಾಸ ಮೂರ್ತಿಯವರಿಗೆ ದಾವಾಸ್ತಿಯನ್ನು ನಿಪಿ-4 ರಂತೆ ಶಾಂತಮ್ಮನವರಿಗೆ ಮಾರಾಟ ಮಾಡಲು ಯಾವುದೇ ಸ್ವಾತಂತ್ರ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ದಾವಾಸ್ತಿಯ ಮೇಲೆ ನನ್ನ ಅತೆತಗೂ ಸಹ ಯಾವುದೇ ಕಾನೂನಾತ್ಮಕ ಹಕ್ಕು ಸೃಷ್ಟಿಯಾಗದ ಕಾರಣ ಸದರಿಯವರು ನನಗೆ ಮಾಡಿಕೊಟ್ಟಿರುವ ನಿಪಿ-1 ಸಹ ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ದಾವಾಸ್ತಿಯಲ್ಲಿ ನಾನು ಸ್ವಾಧೀನದಲ್ಲಿಲ್ಲದ ಕಾರಣ ಅದರ ಚೆಕ್ಕುಬಂದಿಯನ್ನು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪೈಪ್ ಲೈನ್ ಇರುವ ಬಗ್ಗೆಯಾಗಲಿ ಅಥವಾ ಎಲ್ಲಿಂದ ಬಂದಿದೆ ಎಂಬ ಬಗ್ಗೆಯಾಗಲಿ ನನಗೆ ಗೊತ್ತಿಲ್ಲ. ಈ ದಾವೆಯ 2 ನೇ ಪ್ರತಿವಾದಿಯ ಆಸ್ತಿಯಾದ ಸರ್ವೆ ನಂ 11/6 ಮತ್ತು 11/7 ರ ಆಸ್ತಿಯಿಂದ ದಾವಾಸ್ತಿಗೆ ನೀರನ್ನು

ಒದಗಿಸಲು ಪೈಪ್ ಲೈನ್ ಸಂಪರ್ಕವನ್ನು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನನ್ನ ಅತ್ತೆ ಶಾಂತಮ್ಮನ ಮೇಲೆ ಅಸಲು ದಾವಾ ನಂ 35/2018 ನ್ನು ದಾಖಲಿಸಿದ ಕಾರಣ ಸದರಿಯವರ ಕುಮ್ಮಕ್ಕಿನ ಮೇಲೆ ನಾನು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಾಗಲಿ ಅಥವಾ ನನ್ನ ಅತ್ತೆಯಾದ ಶಾಂತಮ್ಮನಾಗಲಿ ದಾವಾಸ್ತಿಯಲ್ಲಿ ಎಂದಿಗೂ ಸ್ವಾಧೀನಾನುಬಚಿವದಲ್ಲಿ ಇಲ್ಲ, ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ದಾಖಲೆಗಳ ಅಧಾರದ ಮೇಲೆ ನಾನೇ ಸ್ವಾಧೀನದಲ್ಲಿದ್ದೆನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಆಸ್ತಿಯನ್ನು ಖರೀದಿಸುವವರು ಖರೀದಿಸುವ ಆಸ್ತಿಯ ಕುರಿತು ಪೂರ್ವಾಪರ ಕಾನೂನಿನ ಸಲಹೆ ಪಡೆದು ಪರಿಶೀಲಿಸಿ ಆಸ್ತಿಯನ್ನು ಖರೀದಿಸುತ್ತಾರೆ ಎಂದರೆ ನನಗೆ ಅದರ ಬಗೆಗ ಮಾಹಿತಿ ಇಲ್ಲ. ದಾವಾಸ್ತಿಯ ಕುರಿತು ಹೆಚ್ ಎನ್ ಶ್ರೀನಿವಾಸ ಮೂರ್ತಿಯವರ ವಂಶಸ್ಥರ ವಿವರವನ್ನಾಗಲಿ ಅಥವಾ ಅವರಿಗೆ ದಾವಾಸ್ತಿಯ ಮೇಲೆ ಇರುವ ಹಕ್ಕಿನ ಕುರಿತಾಗಲಿ ಪರಿಶೀಲಿಸಿದ್ದೀರ ಎಂದರೆ ಸಾಕ್ಷಿ ನನ್ನ ಅತ್ತೆಯ ಪಹಣಿಯನ್ನು ಪರಿಶೀಲಿಸಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಕುರಿತು ನನ್ನ ಅತ್ತೆ ಖರೀದಿಸುವ ಮುನ್ನ ಪರಿಶೀಲಿಸಿದ್ದೀರ ಬಗ್ಗೆ ನನಗೆ ಮಾಹಿತಿ ಇಲ್ಲ,

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.